**ಓ.ಎಸ್. ನಂ. 434/2010 ಪಿ.ಡಬ್ಲೂ-1 ಹೆಸರು -ಕೊಂಡಮ್ಮ**

ಸಾಕ್ಷಿಯನ್ನು ದಿನಾಂಕಃ **06/06/2019** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಆರ್.ಎಂ.ಎಸ್ ವಕೀಲರಿಂದಃ-

ಬಿ.ಸುಬ್ಬಯ್ಯ ಒಂದನೇ ಪ್ರತಿವಾದಿಯವರು ಮೂಲತಃ ಮಾದಾಪುರ ಗ್ರಾಮದವರಾಗಿರುತ್ತಾರೆ. ಸುಬ್ಬಯ್ಯ ನವರಿಗೆ ಯಾವುದೇ ಮೂಲ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಆ ಆಸ್ತಿಗಳ ವಿವರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಗಂಡ ಸುಬ್ಬಯ್ಯ ನ ತಂದೆಯ ಹೆಸರು ದೊಡ್ಡಸುಬ್ಬಯ್ಯ ಮತ್ತು ಅವರ ತಾಯಿ ಪಾಪಮ್ಮ. ನಿಪಿ-10 ರಂತೆ ಸುಬ್ಬಯ್ಯ ನವರಿಗೆ ವೆಂಕಟಮ್ಮನವರ ಮುಖಾಂತರ ಹಕ್ಕು ಬದಲಾವಣೆ ಯ ಮೇರೆಗೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-10 ರಂತೆ ಸುಬ್ಬಯ್ಯನವರ ಹೆಸರು ದಾಖಲಾದ ಮೇಲೆ ಅವರೆ ಸ್ವಾಧೀನದಲ್ಲಿದ್ದರು ಎಂದರೆ ಸರಿ. ನಂತರ ಸುಬ್ಬಯ್ಯರವರ ಆರೋಗ್ಯ ಸರಿಯಿಲ್ಲದ ಕಾರಣ ಅವರ ಎರಡನೇ ಹೆಂಡತಿ ವಿಶಾಲಮ್ಮ ನವರ ಹೆಸರಿಗೆ ಐಟಂ ನಂ.1 ರ ದಾವಾ ಆಸ್ತಿಯು ನಮೂದಾಯಿತು ಎಂದರೆ ಸರಿಯಲ್ಲ. ನಂತರ ವಿಶಾಲಮ್ಮನವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಿಶಾಲಮ್ಮನವರು ಸುಬ್ಬಯ್ಯನವರಿಗೆ ಎರಡನೇ ಹೆಂಡತಿಯಾಗುತ್ತಾರೆ.

ದಿನಾಂಕ 11.06.2010 ರಂದು ಪ್ರತಿವಾದಿ-1(ಎ) ರವರು ಪ್ರತಿವಾದಿ -1(ಬಿ) ರವರೆಗೆ ಐಟಂ ನಂ.1 ದಾವಾ ಆಸ್ತಿಯನ್ನು ನೊಂದಾಯಿತ ದಾನ ಪತ್ರದ ಮೂಲಕ ಬರೆದುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ ಆ ಸಮಯದಿಂದ ಪ್ರತಿವಾದಿ-1(ಬಿ) ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನೊಂದಾಯಿತ ದಾನ ಪತ್ರ ನನಗೆ ಗೊತ್ತಿದ್ದರು ಸಹ ಅದನ್ನು ನಾನು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಆ ಪತ್ರಗಳು ನನ್ನ ಗಮನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ಮತ್ತು ನಿಪಿ-10 ದಾಖಲೆಗಳನ್ನು ನಾನು ಯಾವುದೇ ಪ್ರಾಧೀಕಾರದ ಮುಂದೆ ಪ್ರಶ್ನೆ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ಐಟಂ ನಂ.2 ದಾವಾ ಆಸ್ತಿಯು ಬಿ.ಸುಬ್ಬಯ್ಯ ನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಐಟಂ ನಂ. 2 ಆಸ್ತಿಯನ್ನು ಎರಡು ಭಾಗ ಮಾಡಿ ಅದರಲ್ಲಿ ಒಂದು ಭಾಗವನ್ನು ಪ್ರತಿವಾದಿ-1(ಎ) ರವರಿಗೆ ನೊಂದಾಯಿತ ದಾನ ಪತ್ರದ ಮುಖಾಂತರ ಬಂದಿದೆ ಎಂದರೆ ನನಗೆ ಗೊತ್ತಿಲ್ಲ ಇನ್ನುಳಿದ ಅರ್ಧ ಭಾಗವನ್ನು ಪ್ರತಿವಾದಿ1(ಬಿ) ರವರಿಗೆ ಅರಿಶಿಣ ಕುಂಕುವುಕ್ಕಾಗಿ ದಾನವಾಗಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಪ್ರತಿವಾದಿ-1 (ಎ) ಮತ್ತು (ಬಿ) ಅವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಬಿ.ಸುಬ್ಬಯ್ಯನವರ ದಾವಾ ಆಸ್ತಿಗಳು ಸ್ವಯಾರ್ಜಿತ ವಾದ ಕಾರಣ ಅವರು ಅವರ ಎರಡನೇ ಹೆಂಡತಿ ಅಂದರೆ ಪ್ರತಿವಾದಿ -1 (ಎ) ಮತ್ತು ಅವರ ಮಗಳು ಪ್ರತಿವಾದಿ -1(ಬಿ) ರವರಿಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಅಧಿಕಾರವಿಲ್ಲ. ಪ್ರತಿವಾದಿಯವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾಧಂ,
ನಂಜನಗೂಡು